
ಚಂದಾಗೌವ್ನೆ ಅಂತ ಹೇಳಿದ್ನಲ್ಲ; ಅವನೂ ಹಿಂಗೆಯ ನಾನು ಹಿತ್ತಲಲ್ಲಿ ಬಟ್ಟೆ ಒಗಿಬೇಕಾದರೆ ಏನಾದರೂ ನೆಪ ತಕ್ಕಂಡು ಬಂದು ಕೀಟಲೆ ಮಾಡೋರು, ದೊಡ್ಡ ಚಾಕಲೇಟ್ ಯಾರಿಗೂ ಕಾಣದಂಗೆ ಕೊಡೋರು. ಒಂದೊಂದಪ ಮಧ್ಯಾಹ್ನ ಎಲ್ಲಾ ಊಟ ಮಾಡಿ ಮಲ್ಕೊಂಡಾಗ 'ಮೇಲ್ಗಡೆ ಪ್ರೊಫೆಸರ್ ರೂಮ್‌ಗೆ ಬಾ' ಅನ್ನೋರು. ಅಲ್ಲಿ ನಮ್ಮೂರ್ ರಾಖಿ ಮಾಡ್ದಂಗೆ ಮಾಡೋರು. ಅವನಿಗಿಂತ ಇವರು ವಸಿ ಜಾಸ್ತೀನೆ ಮಾಡೋರು. ಜೊತೆಗೆ ಏನೇನೋ ತಕ್ಕಂಬರೂರು, 'ಶಾನೆ ಪ್ರೀತಿಸ್ತೀನಿ' ಅಂತ ಬೇರೆ ಹೇಳೋರು. ನಂಗೆ ಇವ ಸಂದ ಕಾಣ್ತಿದ್ದ, ಕುಸಿ ಕೊಡ್ತಿದ್ದ. 'ಸೇವಂತಿಯೆ ಸೇವಂತಿಯೆ...' ಅಂತ ಹಾಡು ಬೇರೆ ಹಾಡಿ, ಜಡೆ ಎಳೆದು ಅನಾಮತ್ ತಬ್ಬಿಕೊಂಡ್ ಬಿಡೋರು. ಆದರೆ ಆ ಪ್ರೊಫೆಸರ್ ನಂಗೆ ಅಷ್ಟು ಚಂದಾ ಕಾಣ್ತಾ ಇರಲಿಲ್ಲ. ಆದರೂವೆ ಏನ್ ಮಾಡಕ್ಕಾಯ್ತದೆ, ಅವರ ಮನೇಲಿ ತಿನ್ಕಂಡ್ ಬಿದ್ದೀವ್ನಲ್ಲ ಅಂತ ಸುಮ್ನೆ ಆ ವಯ್ಯ ಮಾಡಿದ್ದೆಲ್ಲಾ ಮಾಡಿಸ್ಕೊತಿದ್ದೆ. 'ಸೇವಂತಿ ವಸಿ ಕಾಲಿಗೆ ಎಣ್ಣೆ ಒತ್ತು ಕೊಡ್ಬಾ' ಅಂತ ಎಲ್ಲರಿಗೂ ಕೇಳೋವಂಗೆ ರಾತ್ರಿ ಕರಿಯೋದು. ಅಲ್ಲೇನು ಎಣ್ಣೇನೂ ಇರ್ತಿರಲಿಲ್ಲ, ಬೆಣ್ಣೇನೂ ಇರ್ತಿರಲಿಲ್ಲ, ಹೋಗ್ಲಿ ಪಾರ್ವತಕ್ಕನಾದರೂ ಒಂದು ದಪನಾದರೂ ನಂಜೊತೆ ಮಾಡಿಗೆ ಬಂದು ಏನು ಎತ್ತ ಅಂತ ನೋಡ್ತಾನೂ ಇರಲಿಲ್ಲ. ಹಿಂಗಾಗಿ ಆವಯ್ಯಂಗೆ ಯಾರ ಭಯನೂ ಇರ್ತಿಲಿಲ್ಲ.

ನಾನೇ ಕೊಸರಾಡಿಕೊಂಡು ಬಿಡಸ್ಕೊಂಡು ದಪ ದಪ ಅಂತ ಕೆಳಕ್ಕಿಳಿದು ಬರ್ತಿದ್ದೆ.

'ಏಯ್ ಅದೇನೆ ಹಂಗ ಸದ್ದು ಮಾಡ್ಕೋಂಡು ಇಳಿತೀಯ, ಮಗು ಮಲ್ಕೊಂಡಿದೆ' ಅಂತ ಅಕ್ಕ ಗದರೋಳು. ನಂಗೂ ಆವಯ್ಯ ಬಿಟ್ಟರೆ ಸಾಕು ಅನ್ನಿಸ್ತಿತ್ತು. ಕಡ್ದು ಓಡಿ ಬರ್ತಿದ್ದೆ.

ಪ್ರೊಫೆಸರ್ ಮತ್ತೆ ಅವರಳಿಯ ಇಬ್ಬರೂವೆ 'ನೀನು ಇದನ್ನೆಲ್ಲಾ ಯಾರ ಕೂಟನು ಹೇಳಬಾರ್ದು' ಅನ್ನೋರು. ಅಯ್ಯೋ ನಂಗೆ ಅಷ್ಟು ಗೊತ್ತಾಗಕಿಲ್ವಾ? ಆವಕ್ಕ ನನ್ನ ತಾವ ಮಾತೇ ಆಡತಿರ್ನಿಲ್ಲ, ಅಷ್ಟಕ್ಕೂ ನಿನ್ನ ಗಂಡ ಮತ್ತು ನಿನ್ನ ಅಪ್ಪ ನಂಗೆ ಹಿಂಗೆಲ್ಲಾ ಮಾಡ್ತಾರೆ ಅಂತ ಹೇಳಕಯ್ತದಾ?

ನಾನು ಎಲ್ಲೆಲ್ಲೋ ಒಂಟೋದೆ ಅಲ್ವಾ? ನಂಗೆ ಆ ಕಥೆಗಾರಣ್ಣನ ತರ ಸೀದಾ ಹೇಳ್ಕೊಂಡು ಹೋಗಾಕ



ಬರಲ್ಲ ಕಾಣೆ, ಮಂಗನಂಗೆ ಮನಸು ಎಲ್ಲೆಲ್ಲೋ ಒಂಟೋಯ್ತದೆ, ಈಗ ಪೋಲೀಸ್ ಸ್ಟೇಷನ್‌ಗೆ ಬಂದವಲ್ಲಾ. ಅಲ್ಲೂ ಎಲ್ಲರೂ, 'ನಿನ್ನ ಬಸಿರು ಮಾಡ್ದೋರು ಯಾರು ಯೋಳು ಅಂತ ಕೇಳೋರೆ, ಮದ್ವೆ ಆದಮೇಲೆ ಮಕ್ಕ ಆಗೋದು, ಇಂಥ ಆಟಕ್ಕೆಲ್ಲಾ ಬಸಿರು ಆಗ್ತಾರೆ ಅಂತ ಸತ್ವಾಗ್ಲೂ ನಂಗೆ ಗೊತ್ತಿರ್ಲಿಲ್ಲ ಕಾಣೆ. ಹಂಗೂ ಒಂದ್ ದಪ ಆ ಪ್ರೊಫೆಸರ್ ಹೇಳ್ದ, 'ನಿಂಗೇನಾದರೂ ಹೆಚ್ಚುಕಮ್ಮಿಯಾದ್ರೆ ಮೊದಲು ನಂಗೆ ಹೇಳು. ಬೇರೆ ಯಾರ್ಗೂ ಹೇಳಬೇಡ' ಅಂತ. ನಂಗೆ ಅವರ ಮನೇಲಿದ್ದಾಗ ತಿಳಿಲೇ ಇಲ್ಲ.

ನನ್ನ ಯಾರು ಬಸಿರು ಮಾಡಿದರು ಅಂತ